August 2014 IJRSS Volume 4, Issue 3 ISSN: 2249-2496

# A Review of 'Shabdhamani Darpanam' of Keshiraja

**Dr Munishamappa A**

Associate Professor,

GFGC, Bangarapet, Kolar

## ಕೇಶಿರಾಜನ 'ಶಬ್ದಮಣಿ ದರ್ಪಣಂ' ಒಂದು ಪರಿಶೀಲನೆ

(ಸಂಧಿ ಮತ್ತು ನಾಮ ಪ್ರಕರಣಗಳು)

**ಡಾ.ಎ.ಮುನಿಶಾಮಪ್ಪ**

ವ್ಯಾಕರಣ ಶಾಸ್ತ್ರಕ್ಕೆ ಭಾರತೀಯ ಶಾಸ್ತ್ರ ಪರಂಪರೆಯಲ್ಲಿ ವಿಶೇಷ ಮನ್ನಣೆಯಿದೆ. "ಭಾರತೀಯ ಶಿಕ್ಷಣ ಪದ್ಧತಿಯಲ್ಲಿ ವ್ಯಾಕರಣ ಶಾಸ್ತ್ರಕ್ಕಿರುವ ಮನ್ನಣೆ ಮತ್ತಾವ ಶಾಸ್ತ್ರಕ್ಕೂ ಇಲ್ಲ. ಭಾರತೀಯ ಶಾಸ್ತ್ರಗಳ ಅಭ್ಯಾಸಕ್ಕೆ ಇದೇ ತಳಹದಿ. ಇದನ್ನು ಕಲಿತ ಮೇಲೆಯೇ ಉಳಿದ ಶಾಸ್ತ್ರಗಳ ಅಧ್ಯಯನ ಆರಂಭಿಸಬೇಕು. ಸಮಸ್ತ ವಿದ್ಯೆಗಳಲ್ಲಿ ಇದು ಮೂಲ ಭೂತವೆನಿಸುವುದರಿಂದ ಇದರಲ್ಲಿ ಪರಿಣತರಾದ ವೈಯ್ಯಾಕರಣರು ವಿದ್ವಾಂಸರಲ್ಲಿ ಅಗ್ರಗಣ್ಯರೂ, ಅಗ್ರಮಾನ್ಯರೂ ಆಗಿರುತ್ತಾರೆ" ಎಂಬ ತ.ಸು.ಶ್ಯಾಮರಾವ್ ಅವರ ಹೇಳಿಕೆ ವ್ಯಾಕರಣ ಶಾಸ್ತ್ರದ ಮಹತ್ವವನ್ನು ಸಾರುತ್ತದೆ.

ವ್ಯಾಕರಣವೆಂದರೆ ಪದ ಸ್ವರೂಪವನ್ನು, ಪದಗಳ ವಿಕರಣವನ್ನು ತಿಳಿಸುವ ಶಾಸ್ತ್ರ. ಶಬ್ದಕ್ಕೆ ಸಾಧುತ್ವವನ್ನು ಎಂದರೆ ಪ್ರಯೋಗಾರ್ಹತೆಯನ್ನು ಬೋಧಿಸುವ ಗ್ರಂಥವನ್ನು ವ್ಯಾಕರಣವೆಂದು ಕರೆಯುವರು. "ವ್ಯಾಕರಣವು ಒಂದು ಭಾಷೆಯ ಧ್ವನಿ, ಪದ, ಮತ್ತು ವಾಕ್ಯ ರಚನಾ ಶಾಸ್ತ್ರವಾಗಿದ್ದು, ಒಂದು ಭಾಷೆಯಲ್ಲಿನ ವರ್ಣ, ಪದಗಳ ಸ್ವರೂಪ, ಪದ ಸಂಯೋಜನೆ, ಪದಗಳಿಗಿರುವ ಸಂಬಂಧ ಮತ್ತು ಅವು ವಾಕ್ಯದಲ್ಲಿ ವಹಿಸುವ ಪಾತ್ರ ಇತ್ಯಾದಿಗಳಿಗೆ ಸಂಬಂಧಿಸಿದ ಅಧ್ಯಯನವಾಗಿದೆ." ಅಂಥ ಅಧ್ಯಯನ ಗ್ರಂಥಗಳಲ್ಲಿ ಕೇಶಿರಾಜನ 'ಶಬ್ದಮಣಿ ದರ್ಪಣ' ಹಳೆ ಹನ್ನಡದ ಅಧಿಕೃತ ವ್ಯಾಕರಣವಾಗಿದೆ. ಕನ್ನಡ ಭಾಷೆಯ ಅಂಗಗಳನ್ನೆಲ್ಲ ಈ ಕೃತಿಯಲ್ಲಿ ಸಮರ್ಪಕವಾಗಿ ವಿವರಿಸಿರುವ ಕೇಶಿರಾಜ, ಅನಂತರದ ಕನ್ನಡ ವೈಯ್ಯಾಕರಣಿಗಳಿಗೆ ಮಾದರಿಯಾಗಿದ್ದಾನೆ. ಹಾಗಾಗಿ 'ಶಬ್ದಮಣಿ ದರ್ಪಣ'ಕ್ಕೆ ಕನ್ನಡ ವಾಙ್ಮಯ ಪರಂಪರೆಯಲ್ಲಿ ಮಹತ್ವದ ಸ್ಥಾನವಿದೆ. ಇಂಥ ವಿಶಿಷ್ಟ ಗ್ರಂಥವನ್ನು ಕುರಿತು ಈಗಾಗಲೇ ಹಲವು ವಿದ್ವಾಂಸರು ಚರ್ಚಿಸಿದ್ದಾರೆ. ಆದರೆ ಚರ್ಚೆ ಮುಗಿದಿಲ್ಲ. ಹದಿಮೂರನೆಯ ಶತಮಾನದಿಂದ ಇದುವರೆವಿಗೂ ಅದು ತನ್ನ ಪ್ರಾಮುಖ್ಯತೆಯನ್ನು ಮತ್ತು ಚರ್ಚೆಯನ್ನು ಉಳಿಸಿಕೊಂಡಿದೆ ಎಂಬುದೇ ಅದರ ಮೌಲಿಕತೆಗೆ ಸಾಕ್ಷಿ. ಈ ಹಿನ್ನೆಲೆಯಲ್ಲಿ 'ಶಬ್ದಮಣಿ ದರ್ಪಣ'ದ ಸಂಧಿ ಪ್ರಕರಣ ಮತ್ತು ನಾಮ ಪ್ರಕರಣಗಳನ್ನು ಆಧರಿಸಿ ಪ್ರಸ್ತುತ ಕೃತಿಯನ್ನು ಇನ್ನೊಮ್ಮೆ ಪರಿಶೀಲಿಸಬಹುದಾಗಿದೆ.

1.**ವರ್ಣಮಾಲೆ** : ವರ್ಣಮಾಲೆಯನ್ನು ಕುರಿತು ಕೇಶಿರಾಜನ ವಿವರಣೆ 'ಶಬ್ದಮಣಿ ದರ್ಪಣ'ದಲ್ಲಿ ದೀರ್ಘವಾಗಿದೆ. ಕಡಲಿನಿಂದ ಸುತ್ತುವರಿದ ಈ ಭೂಮಿಯಲ್ಲಿ ಅಕ್ಷರಗಳನ್ನು ಓದುವ ಕ್ರಮ ಪ್ರಸಿದ್ಧವಾಗಿದೆ. ಅಕ್ಷರಗಳು ಅ ಕಾರದಿಂದ ಪ್ರಾರಂಭವಾಗಿ ಳ ಕಾರದವರೆಗೆ ಪರಿಪೂರ್ಣವಾಗಿವೆ ಎಂದುಸೂತ್ರ 14 ರಲ್ಲಿ

ಹೇಳಿದ್ದಾನೆ. (ಡಿ.ಎಲ್.ನರಸಿಂಹಾಚಾರ್ ಅವರು ಸಂಪಾದಿಸಿರುವ ಕೃತಿಯಲ್ಲಿ) ಈ ಹೇಳಿಕೆ ಸಾಧುವಾಗಿಯೇ ತೋರುತ್ತದೆ. ಆದರೆ ವಿಚಾರ ಮಾಡಿದರೆ ಈ ಹೇಳಿಕೆಯಲ್ಲಿ ಸ್ವಲ್ಪ ಅತಿ ವ್ಯಾಪ್ತಿ ದೋಷವಿರುವುದು ಕಂಡು ಬರುತ್ತದೆ. 'ಕಡಲಿನಿಂದ ಸುತ್ತುವರಿದ ಭೂಮಿ' ಎಂದಾಗ ಜಗತ್ತಿನಾದ್ಯದಂತ ಎಂಬ ಅರ್ಥ ಹೊರಡುತ್ತದೆ. ಅಂದರೆ ವಿಶ್ವದ ಎಲ್ಲಾ ಭಾಷೆಗಳಲ್ಲಿ ಈ ವರ್ಣ ಪಾಠಕ್ರಮವಿದೆ ಎಂದಾಯಿತು. ಕೇಶಿರಾಜನ ಕಾಲಕ್ಕೆ ಭೂಮಿ ಎಂದರೆ ಭರತ ಖಂಡವಷ್ಟೆ. ಆದ್ದರಿಂದ ಸಂಸ್ಕೃತ ಮತ್ತು ಇತರೆ ಭಾರತೀಯ ಭಾಷೆಗಳಲ್ಲಿ ಈ ವರ್ಣ ಪಾಠಕ್ರಮವಿದೆ ಎಂಬುದಾಗಿ ಅರ್ಥ ಮಾಡಿಕೊಳ್ಳಬೇಕಾಗಿದೆ.

2.**ಱ, ಕುಳ,ಕ್ಷಳ:** ಇನ್ನು ವರ್ಣಮಾಲೆಯಲ್ಲಿ ಅ ಕಾರದಿಂದ ಳ ಕಾರದವರೆಗೆ ಎಲ್ಲ ವರ್ಣಗಳೂ ಪರಿಪೂರ್ಣವಾಗಿವೆ ಎಂದು ಹೇಳಿದೆ. ಶ.ಮ.ದ.ವನ್ನು ಪರಿಶೀಲಿಸಿರುವ ಎಲ್ಲ ವಿದ್ವಾಂಸರೂ ಕೇಶೀರಾಜ ಕನ್ನಡ ವರ್ಣಮಾಲೆಯನ್ನು ನಿರೂಪಿಸುವ ಮುನ್ನ ಸಂಸ್ಕೃತ ವರ್ಣಮಾಲೆಯನ್ನು ಕೊಟ್ಟಿದ್ದಾನೆ ಎಂದಿದ್ದಾರೆ. ಈ ಮಾತು ನಿಜ. ಆದರೆ ಸಂಸ್ಕೃತ ವರ್ಣ ಮಾಲೆಯಲ್ಲಿ ಳ ಕಾರವಿಲ್ಲ. ಹಾಗಿದ್ದರೆ ಇದು ಕನ್ನಡ ವರ್ಣ ಮಾಲೆಯೇ ಎಂದರೆ ಕನ್ನಡದ ದೇಸಿ ವರ್ಣಗಳೇ ಇಲ್ಲಿಲ್ಲ. ಸೂತ್ರ 15 ರಲ್ಲಿ ಈ ವರ್ಣ ಮಾಲೆಯಲ್ಲಿರುವ ಳ ಕಾರವನ್ನು ಕುರಿತು ವಿವರಿಸಲಾಗಿದೆ. "ಕನ್ನಡ ಕಾವ್ಯಗಳಲ್ಲಿ ಕುಳ ಪ್ರಾಸದ ಜಾಗದಲ್ಲಿದ್ದರೆ ಕ್ಷಳ ಪ್ರಾಸ ವರ್ಣವಾಗಿ ಬರಬಹುದೇ ಹೊರತು ಅದಕ್ಕೆ ವಿಕಲ್ಪವಾಗಿ ಬರುವ ಲ ಕಾರವಲ್ಲ. ಆದ್ದರಿಂದ ಸಂಸ್ಕೃತ ಅಕ್ಷರಮಾಲೆಯ ಅಂತ್ಯದಲ್ಲಿ ಕ್ಷಳವನ್ನು ಬೆರೆಸಿ ಹೇಳಿದ್ದೇನೆ. ಎಂದಿದ್ದಾನೆ ಕೇಶಿರಾಜ.ಸಂಸ್ಕೃತ ವರ್ಣಮಾಲೆಗೆ ಹೊಸದೊಂದು ವರ್ಣವನ್ನು ಸೇರಿಸಿದ್ದಾನೆಂದಾಯಿತು. ಆದರೆ ಸಂಸ್ಕೃತ ವರ್ಣಮಾಲೆಗೆ ಈ ಳ ಕಾರದ ಅಗತ್ಯವಿಲ್ಲ. ಏಕೆಂದರೆ ಸಂಸ್ಕೃತ ಭಾಷೆಯಲಿ ಳ ಕಾರದ ಸ್ಥಾನದಲ್ಲಿ ಲ ಕಾರವಿದೆ. (ಸಂಸ್ಕೃತ ಭಾಷೆಯಲ್ಲಿ ಳ ಕಾರಯುಕ್ತ ಪದಗಳೇ ಇಲ್ಲ. ಕೇಶೀರಾಜನೆ 'ಲಳಯೋರಭೇದಃ' ಎಂದಿದ್ದಾನೆ.) ಕೇಶಿರಾಜ ಕ್ಷಳವನ್ನು ಸೇರಿಸಿರುವುದು ಸಂಸ್ಕೃತ ವರ್ಣಮಾಲೆಗೆ ಎಂದು ಹೇಳಿದ್ದರೂ, ಆತ ಸೇರಿಸಿರುವುದು ಕನ್ನಡ ಲಿಪಿಯಲ್ಲಿನ ಸಂಸ್ಕೃತ ವರ್ಣಮಾಲೆಗೆ. ಅಂದರೆ ಸಂಸ್ಕೃತದಿಂದ ಕನ್ನಡಕ್ಕೆ ಸ್ವೀಕೃತವಾಗಿರುವ ಲ ಕಾರಯುಕ್ತ ಪದಗಳಿಗೆ ಬದಲಾಗಿ ಮಾತ್ರ.ಕನ್ನಡ ಭಾಷೆ ಗೊತ್ತಿಲ್ಲದ ಸಂಸ್ಕೃತ ಭಾಷೆಯ ಅಭ್ಯಾಸಿಗಳಿಗೆ ಸಂಸ್ಕೃತ ವರ್ಣಮಾಲೆಯಲ್ಲಿ (ದೇವನಾಗರಿ ಲಿಪಿಯಲ್ಲಿ) ಈ ಳ ಕಾರ ನೋಡಲು ಸಿಗುವುದಿಲ್ಲ.

ಈ ಕ್ಷಳವೂ ಸೇರಿ ಕನ್ನಡ ಭಾಷೆಯಲ್ಲಿ ಮೂರು ಳ ಕಾರಗಳಾದವು.(ಱ, ಕುಳ, ಕ್ಷಳ) ಈ ಮೂರು ಳ ಕಾರಗಳಲ್ಲಿ ಱ ಕ್ಕೆ ಮಾತ್ರ ಚಾಕ್ಷುಷ ವ್ಯತ್ಯಾಸವಿದೆ. ಹಿಂದೆ ಉಚ್ಚಾರಣೆಯಲ್ಲಿಯೂ ವ್ಯತ್ಯಾಸವಿತ್ತೆಂದು ತಿಳಿದು ಬರುತ್ತದೆ. ಆದರೆ ಹೊಸಗನ್ನಡದಲ್ಲಿ ವ್ಯತ್ಯಾಸವಿಲ್ಲ. (ಬಡಗ ಭಾಷೆಯಲ್ಲಿ ಈಗಲೂ ಇದೆ ಎಂದು ಹೇಳುತ್ತಾರೆ.) ಗ್ರಾಂಥಿಕ ಭಾಷೆಯಲ್ಲಿ ಱ ಮತ್ತು (ಕುಳ) ಳ ಯುಕ್ತ ಪದಗಳಿಗೆ ಅರ್ಥ ವ್ಯತ್ಯಾಸವಿದೆಯೆಂದು ಕೇಶಿರಾಜ ಪ್ರಯೋಗಗಳ ಮೂಲಕ ನಿರೂಪಿಸಿದ್ದಾನೆ. 'ಲಳಯೋರಭೇದಃ' ಎಂದಿರುವುದರಿಂದ ಪ್ರಾಸ ಸ್ಥಾನದಲ್ಲಿಯೂ ಲ ಮತ್ತು ಳ ಗಳಿಗೆ ಅಭೇದ ಕಲ್ಪಿಸಿದ್ದರೆ ಳ ಕಾರಗಳ ಗೊಂದಲವಿರುತ್ತಿರಲಿಲ್ಲ.

ಱ(ೞ) ಮತ್ತು ಶಕಟ ರೆಫೆಗಳು(ಱ) ಹಳಗನ್ನಡ ಕಾವ್ಯಗಳಲ್ಲಿ ಇರುವುದರಿಂದ ಅವುಗಳ ಅಧ್ಯಯನದ ಸೌಲಭ್ಯಕ್ಕಾಗಿ ಈ ವರ್ಣಗಳನ್ನು ಕುರಿತು ದೀರ್ಘವಾಗಿ ವಿವರಿಸಿದ್ದಾನೆ. ಒಟ್ಟಿನಲ್ಲಿ ಳ ಮತ್ತು ರ ಕಾರಗಳಲ್ಲಿ ಗೊಂದಲವಿತ್ತೆಂಬುದು ಗೊತ್ತಾಗುತ್ತದೆ ಆದ್ದರಿಂದಲೇ ನಡುಗನ್ನಡ ಮತ್ತು ಹೊಸಗನ್ನಡ ಕಾಲಕ್ಕೆ ಒಂದೊಂದೆ ಳ ಮತ್ತು ರ ಕಾರಗಳು ಉಳಿದಿವೆ. ಸೂತ್ರ 33 ರಲ್ಲಿ ಕೇಶಿರಾಜ 181 ಱ ಘಟಿತ ಶಬ್ದಗಳನ್ನು ಕೊಟ್ಟಿದ್ದಾನೆ. ಪ್ರಾಯಶಃ ಱ, ಕುಳಗಳನ್ನು ಹೆಚ್ಚಿನ ವ್ಯತ್ಯಾಸವಿಲ್ಲದೆ ಜನರು ಉಚ್ಚರಿಸುತ್ತಿದಿರಬಹುದು. ಆದ್ದರಿಂದ ಭಾಷಾ ಶುದ್ಧತೆಯನ್ನು ಕಾಪಾಡಲು ಕೇಶೀರಾಜ ಸಾಕಷ್ಟು ಪ್ರಯತ್ನ ಪಟ್ಟಿದ್ದಾನೆ. ಕೆಲವು ಶಬ್ದಗಳಲ್ಲಿನ ಳ, ಱ ವೋ ಕುಳವೋ ಎಂಬುದರ ಬಗೆಗೆ ಕೇಶಿರಾಜನಿಗೂ ಸಂದೇಹವಿದೆ.(ಸೂತ್ರ 35).

3. **ಬಿಂದು, ವಿಸರ್ಗ** : ಸೂತ್ರ 22 ರ ಆರಂಭದಲ್ಲಿ ಕೇಶಿರಾಜ ಬಿಂದು, ವಿಸರ್ಗಗಳನ್ನು "ಸ್ವರ ಪರದೊಳಿರ್ಪಕತದಿಂ" ಎಂದು ಹೇಳಿ ಕೊನೆಯಲ್ಲಿ "ಸ್ವರಾಂಗಮುಂ ವ್ಯಂಜನಾಂಗಮುಂ ತಾವೆಂಬರ್" ಎಂದಿದ್ದಾನೆ. ಸ್ವರಗಳ ಮುಂದೆ ಬರುವುದರಿಂದ ಸ್ವರಾಂಗಗಳೆಂದು ಹೇಳಿರುವುದೇನೊ ಸರಿ. ಆದರೆ ಅನುಸ್ವಾರ, ವಿಸರ್ಗಗಳು ವ್ಯಂಜನಗಳ ಮುಂದೆ ಬರುವುದಿಲ್ಲ. ಹಾಗಾದರೆ ಇವು ಹೇಗೆ ವ್ಯಂಜನಾಂಗಗಳಾಗುತ್ತವೆ ಎಂಬ ಸಂದೇಹ ಉಂಟಾಗುತ್ತದೆ. ಈ ಸಂದೇಹವನ್ನು ಶ.ಮ.ದ.ಕ್ಕೆ ಟೀಕು ಬರೆದಿರುವ ನಿಟ್ಟೂರು ನಂಜಯ್ಯನು ಪರಿಹರಿಸಲೆತ್ನಿನಿಸಿದ್ದಾನೆ. "ಸ್ವರದ ಪರದಲ್ಲಿರುವುದರಿಂದ ಸ್ವರಾಂಗಗಳು, ಸಂಸ್ಕೃತ ವ್ಯಾಕರಣಗಳಲ್ಲಿ ಮ ಕಾರಕ್ಕೆ ಅನುಸ್ವಾರವೂ, ಸ ಕಾರ ರೇಫೆಗೆ ವಿಸರ್ಗವೂ ಆದೇಶಗಳಾಗಿ ಬರುವುದೆಂದು ಹೇಳಿರುವುದರಿಂದ ಮ ಕಾರವನ್ನು ಅನುಸ್ವಾರವೆಂದೂ, ಸ ಕಾರ ರೇಫೆ ಗಳನ್ನು ವಿಸರ್ಗವೆಂದೂ ಹೇಳಿದಂತಾಯಿತು. ಆದುದರಿಂದ ಇವುಗಳು ವ್ಯಂಜನಾಂಗಗಳು ಎಂದು ಹೇಳಿದಂತಾಯಿತು ಎಂದು ವಿಶದಪಡಿಸಿದ್ದಾನೆ" ಎಂದು ತ.ಸು.ಶಾಮರಾಯ ಅವರು ಅಭಿಪ್ರಾಯ ಪಟ್ಟಿದ್ದಾರೆ.ಆದರೂ ಸಂದೇಹ ನಿವಾರಣೆಯಾಗಿಲ್ಲ. ಅನುಸ್ವಾರ ವಿಸರ್ಗಗಳು ಕನ್ನಡದಲ್ಲಿ ಸ್ವರದ ಸಹಾಯದಿಂದ ಮಾತ್ರವೇ ಉಚ್ಚರಿಸಲ್ಪಡುವುದರಿಂದ ಅವು ಸ್ವರ ಸಂಗಾತಿಗಳಾಗಿಯೇ ಇರುತ್ತವೆ.

ಉದಾ: ಅಂ, ಆಃ, ಕಂ = ಕ್ + ಅ +ಂ, ತಂ = ತ್ +ಅ +ಂ,

ಕಂದ = ಕ್ + ಅ +ಂ +ದ್ +ಅ,

ಪುನಃ = ಪ್ + ಉ + ನ್ + ಃ ಇತ್ಯಾದಿ.

ಅನುಸ್ವಾರ, ವಿಸರ್ಗಗಳ ಚಾಕ್ಷುಷ ರೂಪದ ಬಗ್ಗೆಯೂ ಕೇಶಿರಾಜ ವಿಸ್ತಾರವಾಗಿ ಹೇಳಿದ್ದಾನೆ. ಆದರೆ ಅವುಗಳ ಉಚ್ಚಾರಣೆಯನ್ನು ಕುರಿತು ಮೌನವಾಗಿದ್ದಾನೆ. ಸ್ಥೂಲವಾಗಿ ಹೇಳುವುದಾದರೆ ಅನುಸ್ವಾರಕ್ಕೆ ನ್, ಮ್, ಣ್, ಎಂಬ ಮೂರು ಉಚ್ಚಾರಣೆಗಳಿವೆ.

ಉದಾಹರಣೆಗೆ ಕಂದ> ಕನ್ದ (ನ್)

ಚಂದನ>ಚನ್ದನ (ನ್)

ಅಂದ> ಅನ್ದ (ನ್)

ಅಂಬು> ಅಮ್ಬು (ಮ್), ಕೊಂಬು> ಕೊಮ್ಬು ಇತ್ಯಾದಿ.

ಕಂಡು>ಕಣ್ಡು (ಣ್), ಭಂಡ>ಭಣ್ಡ (ಣ್), ಕೊಂಡ>ಕೊಣ್ಡ ಇತ್ಯಾದಿ.

ವಿಸರ್ಗದಲ್ಲಿ ಹ ಉಚ್ಚಾರಣೆಯಿದೆ.ಉದಾ :ಪುನಃ> ಪುನಹ

5. **ಮಹಾಪ್ರಾಣಗಳು** : ಕನ್ನಡ ಭಾಷೆಯಲ್ಲಿ ಮಹಾಪ್ರಾಣಾಕ್ಷರಗಳಿವೆ ಎಂದು ಸಾಧಿಸಿತೋರಿಸಲು ಕೇಶಿರಾಜ ತುಂಬಾ ಕಸರತ್ತು ನಡೆಸಿದ್ದಾನೆ. ಅದಕ್ಕಾಗಿ ಮಹಾ ಪ್ರಾಣಾಕ್ಷರಗಳಿರುವ ಕೆಲವು ಪದಗಳ ಪಟ್ಟಿ ಕೊಟ್ಟಿದ್ದಾನೆ. ಈಗಾಗಲೇ ಆಧುನಿಕ ಭಾಷಾ ವಿಜ್ಞಾನಿಗಳು ಕನ್ನಡದಲ್ಲಿ ಮಹಾ ಪ್ರಾಣಾಕ್ಷರಗಳಿಲ್ಲವೆಂದು ನಿರೂಪಿಸಿದ್ದಾರೆ. ಕೇಶಿರಾಜ ಉದಾಹರಿಸಿರುವ ಪದಗಳಲ್ಲಿ ಕೆಲವು ಸಂಸ್ಕೃತ, ಪ್ರಾಕೃತ ಮತ್ತು ಮರಾಠಿ ಭಾಷೆಗಳಲ್ಲಿ ಸಹಜವಾಗಿದ್ದು, ಕನ್ನಡಕ್ಕೆ ಬಂದಿರುವಂಥವು. ಇನ್ನು ಕೆಲವು ತಪ್ಪು ಉಚ್ಚಾರಣೆಯಿಂದ ಆಗಿರುವಂಥವು. ಕನ್ನಡದ ಸೋದರ ಭಾಷೆಯಾದ ತಮಿಳಿನಲ್ಲಿ ಮಹಾ ಪ್ರಾಣಾಕ್ಷರಗಳಿಲ್ಲವೆಂಬುದು ಇದಕ್ಕೆ ಪುಷ್ಟಿ ನೀಡುತ್ತದೆ. ಕೇಶಿರಾಜನಿಗೂ ಕನ್ನಡದಲ್ಲಿ ಮಹಾ ಪ್ರಾಣಾಕ್ಷರಗಳು ಸಹಜವಾಗಿ ಇರುವುದರ ಬಗ್ಗೆ ಸಂದೇಹವಿತ್ತು ಎಂಬುದು

ಆತನ ಸೂತ್ರದಿಂದಲೇ ಗೊತ್ತಾಗುತ್ತದೆ. ಈ ಅಕ್ಷರಗಳು ಕನ್ನಡದಲ್ಲಿ ಸಹಜವಾಗಿ ಇದ್ದದ್ದಾಗಿದ್ದರೆ ಆತ "ಒಳವು ಮಹಾಪ್ರಾಣಂಗಳ್ ವಿಳಸತ್ಕರ್ಣಾಟ ಭಾಷೆಯೊಳ್ ಕೆಲವು ನಿಜೋಜ್ವಳಮಾಗಿ" ಎಂದು ಒತ್ತು ಕೊಟ್ಟು ಹೇಳುವ ಅಗತ್ಯವಿರಲಿಲ್ಲ.(ಅಲ್ಪಪ್ರಾಣಾಕ್ಷರಗಳ ಬಗ್ಗೆಈ ರೀತಿ ಹೇಳುವುದಿಲ್ಲವೆಂಬುದನ್ನು ಗಮನಿಸಬೇಕು.)

**5. ಅಚ್ಚಗನ್ನಡ ಶುದ್ಧಗೆಗಳು** :ಕೇಶಿರಾಜ ಸೂತ್ರ 43 ರಲ್ಲಿ ಅಚ್ಚಗನ್ನಡದಲ್ಲಿ 47 ಶುದ್ಧಗೆಗಳಿವೆ ಎಂದು ನಿರೂಪಿಸಿದ್ದಾನೆ. ಅವುಗಳನ್ನ ಆತ ವಿವರಿಸಿರುವ ರೀತಿ ಹೀಗಿದೆ:

ಸಂಸ್ಕೃತ ವರ್ಣಮಾಲೆಯಲ್ಲಿನ ಅಕ್ಷರಗಳು ______ 57

ಅವುಗಳಿಗೆ ಸೇರಿಸಬೇಕಾದ ದೇಸಿ ಅಕ್ಷರಗಳು – 05

ಒಟ್ಟು – 57

ಇವುಗಳಲ್ಲಿ ಕಳೆಯಬೇಕಾದ ಸಂಸ್ಕೃತ ವರ್ಣಗಳು – 10

ಉಳಿದವು ಅಚ್ಚಗನ್ನಡ ಶುದ್ಧಗೆಗಳು ---------- 47.

ಆಧುನಿಕ ವಿದ್ವಾಂಸರು ಈ 47 ವರ್ಣಗಳಲ್ಲಿ 10 ಮಹಾಪ್ರಾಣಗಳನ್ನು, 4 ಸಂಧ್ಯಕ್ಷರಗಳನ್ನು, 1 ಅನುಸ್ವಾರವನ್ನು, ಕಳೆದು ಉಳಿದ 32 ಅಕ್ಷರಗಳು ಮಾತ್ರ ಕನ್ನಡ ಭಾಷೆಗೆ ಅಗತ್ಯವಿರುವ ಶುದ್ಧಗೆಗಳೆಂದು ಹೇಳಿದ್ದಾರೆ.

ಸೂತ್ರ 38 ರಲ್ಲಿ ಕೆಲವು ಲಾಂತ ಶಬ್ದಗಳು ಳಾಂತಗಳಾಗಿ ಉಚ್ಚರಿಸಲ್ಪಡುತ್ತಿದ್ದುದರ ಕುರಿತು ಕೇಶಿರಾಜ ಪ್ರಸ್ತಾಪಿಸಿದ್ದಾನೆ. ಬೆರಲ್, ಒರಲ್, ಕೊರಲ್, ಮುಂತಾದ ಶಬ್ದಗಳು 'ಲ್' ವ್ಯಂಜನದಿಂದ ಕೊನೆಯಾಗುವಂಥವು. ಗ್ರಾಮ್ಯರು ಈ ಶಬ್ದಗಳನ್ನು ಕುಳಾಂತ ಮಾಡಿಕೊಂಡು ಉಚ್ಚರಿಸುತ್ತಾರೆ. ಹಾಗೆ ಉಚ್ಚರಿಸಕೂಡದು ಎಂದಿದ್ದಾನೆ. ಕವಿಗಳು ಕಾವ್ಯಗಳಲ್ಲಿ ಇಂಥ ಪ್ರಯೋಗಗಳನ್ನು ಮಾಡುತ್ತಿದ್ದರೆಂಬುದಕ್ಕೆ ದಾಖಲೆಗಳಿಲ್ಲ. (ಕಾವ್ಯ ಪ್ರಯೋಗ ಸಿಕ್ಕಿದ್ದರೆ ಕೇಶಿರಾಜ ಖಂಡಿತವಾಗಿಯೂ ಇಲ್ಲಿ ದಾಖಲಿಸುತ್ತಿದ್ದ.) ವ್ಯಾವಹಾರಿಕ ಭಾಷೆಯಲ್ಲಿ ಇಂತಹ ಪ್ರಯೋಗಗಳು ಕಾಣಿಸಿದ್ದಿರಬಹುದು. ಅಂಥ ಪ್ರಯೋಗಗಳನ್ನು ತಿದ್ದುವ ಪ್ರಯತ್ನ ಇಲ್ಲಿದೆ. ಅಂದರೆ ಕೇಶಿರಾಜ ಆಡು ಭಾಷೆಯ ಕಡೆಗೂ ಗಮನ ಹರಿಸಿದ್ದನೆಂಬುದನ್ನು ಇದರಿಂದ ತಿಳಿಯಬಹುದು. "ಯಾವುದು ಶುದ್ಧರೂಪ ಯಾವುದು ಅಶುದ್ಧ ರೂಪ ಎಂಬುದನ್ನು ನಿರ್ಧರಿಸಿ ಭಾಷೆಗೆ ಒಂದು ನಿರ್ದಿಷ್ಟತೆಯನ್ನು ತಂದು ಕೊಡುವುದು ವೈಯ್ಯಾಕರಣನ ಕೆಲಸ ಆ ದೃಷ್ಟಿಯಿಂದ ಕೇಶಿರಾಜನ ಪ್ರಯತ್ನ ಸಾಧುವಾದುದು. ಆದರೆ ಹಳಗನ್ನಡವು ನಡುಗನ್ನಡವಾಗಿ ಪರಿವರ್ತಿತವಾಗುತ್ತಿದ್ದ ಸಂಧಿ ಕಾಲವದು. ಕಾಲ ಪ್ರವಾಹದಲ್ಲಿ ಹಳೆಯ ನಿಯಮಗಳು ಕೊಚ್ಚಿಕೊಂಡು ಹೋಗಿ ಹೊಸ ನಿಯಮಗಳು ಮೂಡುತ್ತವೆ. ನಡುಗನ್ನಡ ಕಾಲಕ್ಕೆ ಳಾಂತವಾಗುತ್ತಿದ್ದ ಆ ಶಬ್ದಗಳು ಹೊಸಗನ್ನಡದಲ್ಲಿ ಸ್ವರಾಂತಗಳಾಗಿವೆ."– ಶ.ಮ.ದ.101 ಸೂತ್ರಗಳು, ಪುಟ 23.

ಉದಾಹರಣೆಗೆ: ಬೆರಲ್>ಬೆರಳ್>ಬೆರಳು.

**5.ಶಿಥಿಲದ್ವಿತ್ವ** : ಶಿಥಿಲದ್ವಿತ್ವದ ವಿಚಾರ ಕೇಶಿರಾಜನ ಸ್ವಂತ ಕಾಣಿಕೆಯಾಗಿದೆ. ಸೂತ್ರ 52 ರಲ್ಲಿ ಪ್ರಕೃತಿಯ ಆರಂಭದ ವರ್ಣವು ಹ್ರಸ್ವ ವಾಗಿದ್ದು, ಱಳ, ಕುಳ, ರೇಫೆಗಳು ಕೊನೆಯಲ್ಲಿದ್ದು ಅವಕ್ಕೆ ಬಹು ವಚನ ಪ್ರತ್ಯಯ 'ಗಳ್', ಚತುರ್ಥಿ ವಿಭಕ್ತಿ ಪ್ರತ್ಯಯ 'ಗೆ' ಮುಂದೆ ಬಂದಾಗ ಬಹುಳವಾಗಿ ಶಿಥಿಲದ್ವಿತ್ವ ಒದಗುತ್ತದೆ ಎಂದು ಹೇಳಲಾಗಿದೆ.ಪ್ರಯೋಗಗಳನ್ನಾಗಿ ಱಟಾಂತಕ್ಕೆ ಅಗಟ್ಗಳ್, ಎಸಟ್ಗಳ್, ನೆಗಟ್ಗಳ್, ಇತ್ಯಾದಿ.

ಕುಳಾಂತಕ್ಕೆ: ಮುಗುಳ್ಗಳ್, ಪುಗುಳ್ಗಳ್, ಎಸಳ್ಗೆ, ಮುಗುಳ್ಗೆ ಇತ್ಯಾದಿ.

ರೇಫಾಂತಕ್ಕೆ ಕನರ್ಗಳ್, ಕೊನರ್ಗಳ್, ತಳಿರ್ಗಳ್ ಇತ್ಯಾದಿ ಪದಗಳನ್ನು ಕೊಡಲಾಗಿದೆ.

ಆದರೆ ಕುರುಳ್ಗಳ್,ಪುರುಳ್ಗಳ್,ಮರುಳ್ಗಳ್, ಎಲರ್ಗಳ್, ಉಗುರ್ಗಳ್, ಬದಿರ್ಗಳ್, ಕದಿರ್ಗಳ್, ತಿಮಿರ್ಗಳ್,ತೆಮರ್ಗಳ್,ಬೆಮರ್ಗಳ್–ಈ ಪದಗಳಲ್ಲಿ ಸೂತ್ರದಲ್ಲಿ ಹೇಳಿದ ನಿಯಮಗಳೆಲ್ಲಾ ಇದ್ದು, ಶಿಥಿಲದ್ವಿತ್ವ ಉಂಟಾಗಿರುವುದಿಲ್ಲ. ಇದಕ್ಕೆ ಕಾರಣ ತಿಳಿಯುವುದಿಲ್ಲ. ಅಲ್ಲದೆ ಶಿಥಿಲದ್ವಿತ್ವ ಇರುವ ಪದಗಳಿಗೂ, ಶಿಥಿದ್ವಿತ್ವ ಇಲ್ಲದ ಪದಗಳಿಗೂ ಬರವಣಿಗೆಯಲ್ಲಿ ವ್ಯತ್ಯಾಸವಿಲ್ಲ. ಶಿಥಿಲದ್ವಿತ್ವ ಎಂದರೆ ದಿತ್ವಾಕ್ಷರವನ್ನು ಒತ್ತಿ ಉಚ್ಚರಿಸದೆ ತೇಲಿಸಿ ಉಚ್ಚರಿಸುವುದು ಎಂದು ಹೇಳಲಾಗುತ್ತದೆ. ಅದು ಹೇಗೆಂಬುದು ಸ್ಪಷ್ಟವಾಗುವುದಿಲ್ಲ. ಇಂಗ್ಲೀಷಿನ walk, talk. ಶಬ್ದಗಳಲ್ಲಿ L ನ್ನು Silent ಎಂದು ತೇಲಿಸಿ ಉಚ್ಚರಿಸಲಾಗುತ್ತದೆ. ಈ ನಿಯಮ ಪ್ರಸ್ತುತ ಶಬ್ದಗಳಿಗೆ ಅನ್ವಯಿಸುವುದಿಲ್ಲ–ಛಂದಸ್ಸಿನಲ್ಲಿ ಮಾತ್ರ ಒತ್ತಕ್ಷರದ ಹಿಂದಿನ ಅಕ್ಷರ ಗುರುವಾಗದೆ ಲಘುವಾಗುತ್ತದೆ. ತೇಲಿಸಿ ಉಚ್ಚರಿಸುವುದು ಹೇಗೆ ಎಂಬುದು ತಿಳಿಯುವುದಿಲ್ಲ.

ಅನಂತರ 'ಪಿರಿದುಂ ಎಂಬುದರಿಂಕಾದಲರ್ಗಳೆಂಬಪದನಾದಿ ದೀರ್ಘಮಾಗಿಯುಂ ಶಿಥಿಲಮಾಯ್ತು' ಎಂದು ಹೇಳಲಾಗಿದೆ. ಸೂತ್ರದಲ್ಲಿ ಹೇಳಿರುವ ನಿಯಮಗಳ ಉಲ್ಲಂಘನೆಯಾಗಿರುವ ಈ ಪದದಲ್ಲಿ ಹೇಗೆ ಮತ್ತು ಏಕೆ ಶಿಥಿಲದ್ವಿತ್ವ ಉಂಟಾಗುತ್ತದೆ ಎಂಬುದಕ್ಕೆ ವಿವರಣೆಯಿಲ್ಲ. ಇಂಥವುಗಳನ್ನು ಅಪವಾದಗಳೆನ್ನಲಾಗಿದೆ. ಹೀಗೆಯೇ ಕ್ರಿಯಾ ಪದಗಳಲ್ಲಿನ ಶಿಥಿಲದ್ವಿತ್ವ ಪದಗಳೂ ಆಗಿವೆ. ಜಗುಟ್ದಂ, ತುಮುಟ್ದಂ, ಅಗುಟ್ದಂ ಪದಗಳು ಶಿಥಿಲದ್ವಿತ್ವಗಳಾದರೆ ತೆರಳ್ದಂ, ಪೊರಳ್ದಂಪದಗಳಲ್ಲಿ ಶಿಥಿಲದ್ವಿತ್ವವಿಲ್ಲವೆನ್ನುತ್ತಾನೆ ಕೇಶಿರಾಜ. ಇಂಥ ಗೊಂದಲಗಳನ್ನು ಆಧುನಿಕ ಭಾಷಾ ವಿಜ್ಞಾನಿಗಳು ವೈಯ್ಯಾಕರಣಿಗಳೂ ನಿವಾರಿಸಿಲ್ಲ. ಈ ಹಿನ್ನೆಲೆಯಲ್ಲಿ ಭಾಷೆಯು ವ್ಯಾಕರಣ ನಿಯಮಗಳಿಗೆ ಪೂರ್ಣವಾಗಿ ಒಳಗಾಗುವುದಿಲ್ಲ ಎಂದಷ್ಟೆ ಹೇಳಬಹುದಾಗಿದೆ. ಅದನ್ನೇ ಕೇಶಿರಾಜ ಬಹುಳ, ಪಿರಿದುಂ, ಪೀನಂ, ಆದಂ, ವಿಕಲ್ಪ ಮುಂತಾದ ಪರಿಭಾಷೆಗಳಲ್ಲಿ ತಿಳಿಸಿದ್ದಾನೆ.

7. **ಸಂಧಿ ವಿಚಾರ:** ಸೂತ್ರ 65 ರಲ್ಲಿ ಕೇಶಿರಾಜ ವಕಾರಾಗಮ ಎಲ್ಲೆಲ್ಲಿ ಆಗುತ್ತದೆ ಎಂಬುದನ್ನು ಗುರುತಿಸಿ,ಯಕಾರ ವಕಾರಗಳು ಬಹುಳವಾಗಿ ಬರುವ ಸಂದರ್ಭಗಳನ್ನು ಹೇಳಿದಾನೆ. ಸಂಸ್ಕೃತ ಪದಗಳಲ್ಲಿ ಮಾತ್ರ ಯಕಾರ ವಕಾರಗಳು ನಿತ್ಯವೆಂದು ಪ್ರಯೋಗಗಳನ್ನು ಕೊಟ್ಟಿದ್ದಾನೆ. ಅನಂತರ ಕನ್ನಡದಲ್ಲಿ ಯತ್ವ ವತ್ವಗಳಿಗೆ ಬಹುಳತೆಯಿಂದ ಲೋಪಮುಂಟು ಎಂದು ಹೇಳಿ ಒತ್ತೆ + ಇಟ್ಟಂ =ಒತ್ತಿಟ್ಟಂ ಎಂದು ಲೋಪಸಂಧಿ ಮಾಡಿದ್ದಾನೆ. ನಾಮರೂಢಿ ಅಳಿಯಬಾರದು ಎಂಬುದು ಸಂಧಿ ನಿಯಮ. ಆದರೆ ಇಲ್ಲಿ ನಾಮ ರೂಢಿ ಅಳಿಯುತ್ತಿದೆ. ('ಒತ್ತೆಯಿಟ್ಟ' ಎಂಬುದಕ್ಕೂ 'ಒತ್ತಿಟ್ಟ' ಎಂಬುದಕ್ಕೂ ಅರ್ಥ ಸಂಬಂಧವಿಲ್ಲ.) ಆದ್ದರಿಂದ ಇಲ್ಲಿ ಯಕಾರಾಗಮವೇ ಸರಿ. ಸಂಧಿ ವಿಕಲ್ಪವನ್ನು ಕುರಿತ ವಿವರಣೆಯಲ್ಲಿಯೂ ಸಂದೇಹವಿದೆ. 'ಕರೆ' ಎಂಬ ಧಾತುಗೆ 'ಅಲ್' ಎಂಬುದು ಪರವಾದರೆ, ಅಕಾರಾಂತವಾದ 'ಇರ' ಎಂಬ ಧಾತುಗೆ 'ಅದೆ' ಎಂಬುದು ಪರವಾದರೆ ಸಂಧಿ ವಿಕಲ್ಪ ಎಂದು ಸೂತ್ರ 71 ರಲಿ ಹೇಳಿದೆ. ಪ್ರಯೋಗಗಳಲ್ಲಿ ವಿಸಂಧಿಗೆ ಕರೆಅಲ್=ಕರೆ+ಅಲ್, ಇರಅದೆ=ಇರ+ಅದೆ ಎಂಬ ಪದಗಳನ್ನು ಹಾಗೂ ಸಂಧಿಗೆ ಮೆಯ್ಗರೆಯಲ್, ಇರದೆ ಎಂಬ ಪದಗಳನ್ನೂ ಕೊಡಲಾಗಿದೆ. (ಮೆಯ್+ಕರೆ+ಅಲ್),(ಇರ+ಅದೆ) ಪ್ರಯೋಗಗಳಲ್ಲಿನ ಕಾವ್ಯಗಳ ಸಾಲುಗಳನ್ನು ಯಾವ ಕಾವ್ಯದಿಂದ ಆರಿಸಲಾಗಿದೆ ಎಂಬುದನ್ನು ಹೇಳಿಲ್ಲ. ಆದ್ದರಿಂದ ಅವುಗಳು ಕೇಶಿರಾಜನ ಸ್ವಂತ ರಚನೆಗಳೆಂದು ಭಾವಿಸಬಹುದು. ಇಲ್ಲಿನ ಸಂಧಿಯ ಪ್ರಯೋಗಗಳು ಸಹಜವಾಗಿವೆ. ವಿಸಂಧಿಯ ಪ್ರಯೋಗಗಳು ಸಹಜವೆನಿಸುವುದಿಲ್ಲ. ಈ ವಿಸಂಧಿಯ ಪ್ರಯೋಗಗಳು ಯಾವುದಾದರೂ ಕಾವ್ಯಗಳಲ್ಲಿ ಅಪರೂಪಕ್ಕೆ ಬಳಕೆಯಾಗಿದ್ದಿರಬಹುದು. ಆಡುಭಾಷೆಯಲ್ಲಂತೂ ಈ ಪ್ರಯೋಗಗಳು ಇದ್ದಿರಲಾರವು. ಹೊಸಗನ್ನಡದಲ್ಲಿ

ಕರೆಯಲು, ಇರದೆ ಎಂಬ ಪದಗಳಿವೆಯೇ ಹೊರತು ವಿಸಂಧಿಯಾಗಿ ಬಳಕೆಯಲ್ಲಿ ಇಲ್ಲ. ಆದ್ದರಿಂದ ಈ ಪದಗಳ ವಿಸಂಧಿಯನ್ನು ವ್ಯಾಕರಣದಲ್ಲಿ ಒತ್ತಾಯ ಪೂರ್ವಕವಾಗಿ ಹೇಳಲಾಗಿದೆ.

**8. ಕೃಲ್ಲಿಂಗ:** ಕೇಶಿರಾಜ ಸೂತ್ರ 83 ರಲ್ಲಿ ಕ್ರಿಯಾ ಪದಗಳು ಕೃಲ್ಲಿಂಗವಾಗುವ ಬಗೆಯನ್ನು ವಿವರಿಸಿದ್ದಾನೆ. ಭೂತಕಾಲ ಹಾಗೂ ಭವಿಷ್ಯತ್ಕಾಲದ ಕ್ರಿಯೆಗಳಲ್ಲಿ ಅಂತರ್ಗತವಾಗಿರುವ ಆಖ್ಯಾತ ವಿಭಕ್ತಿ ಪ್ರತ್ಯಯಗಳನ್ನು ಕಳೆದರೆ ಅವು ಕೃಲ್ಲಿಂಗವಾಗುವುವು. ವರ್ತಮಾನ ಕ್ರಿಯೆ, ವಿಧಿ ಕ್ರಿಯೆ, ಮಧ್ಯಮೋತ್ತಮಪುರುಷ ಕ್ರಿಯೆಗಳಿಂದ ಕೃಲ್ಲಿಂಗಗಳು ಸಂಭವಿಸುವುದಿಲ್ಲ. ಆದ್ದರಿಂದ ಅವಕ್ಕೆ ವಿಭಕ್ತಿ ಪ್ರತ್ಯಯಗಳನ್ನು ಸೇರಿಸಲಾಗದು ಎಂದು ಹೇಳಲಾಗಿದೆ. ಪ್ರಯೋಗವಾಗಿ ಭೂತಕಾಲದ ಕೃಲ್ಲಿಂಗಕ್ಕೆ 'ನಲಿದಂ' ಪದವನ್ನು ಕೊಟ್ಟಿದೆ. ಈ ಪದದಲ್ಲಿನ 'ಅಮ್' ಎಂಬ ಆಖ್ಯಾತ ಪ್ರತ್ಯಯವನ್ನು ಕಳೆದರೆ 'ನಲಿದ' ಎಂಬ ಕೃಲ್ಲಿಂಗ ರೂಪ ಉಳಿಯುತ್ತದೆ. ಅದಕ್ಕೆ 'ಮ್' ಎಂಬ ಪ್ರಥಮಾ ವಿಭಕ್ತಿ ಪ್ರತ್ಯಯವನ್ನು ಸೇರಿಸಿದರೆ 'ನಲಿದಂ' ಎಂದಾಗುತ್ತದೆ. ಹೀಗೆಯೇ ಉಳಿದ ವಿಭಕ್ತಿ ಪ್ರತ್ಯಯಯಗಳನ್ನು ಸೇರಿಸಬಹುದು.

ಹೊಸಗನ್ನಡದಲ್ಲಿ 'ನಲಿದಂ' ಕ್ರಿಯಾ ಪದದ ಅರ್ಥ 'ನಲಿದನು' ಎಂದಾಗುತ್ತದೆ. ಹಾಗೆಯೇ ಕೃಲ್ಲಿಂಗದಲ್ಲಿ 'ನಲಿದಂ' ಎಂಬುದರ ಅರ್ಥ 'ನಲಿದವನು' ಎಂದಾಗುತ್ತದೆ. ಆದ್ದರಿಂದ ಇದು ನಾಮ ಪದವಾಗುತ್ತದೆ.

ಹೀಗೆಯೇ ಭವಿಷ್ಯತ್ ಕಾಲದ ಕೃಲ್ಲಿಂಗಕ್ಕೆ ಪ್ರಯೋಗ 'ಬೇಡುವಂ'.ಇಲ್ಲಿನ 'ಅಮ್' ಎಂಬ ಆಖ್ಯಾತ ಪ್ರತ್ಯಯವನ್ನು ಕಳೆದರೆ 'ಬೇಡುವ' ಎಂಬ ಕೃಲ್ಲಿಂಗ ಉಳಿಯುತ್ತದೆ. ಇದಕ್ಕೆ ಮ್, ಅಮ್,ಇಂ ಮುಂತಾದ ಸಪ್ತ ವಿಭಕ್ತಿಗಳನ್ನು ಹತ್ತಿಸಬಹುದು.

ಕೇಶಿರಾಜನು ವರ್ತಮಾನ ಕಾಲಸೂಚಕ ಪ್ರತ್ಯಯವಿರುವ ಕ್ರಿಯಾಪದ ಕೃಲ್ಲಿಂಗವಾಗುವುದಿಲ್ಲವೆನ್ನುತ್ತಾನೆ. ಪ್ರಯೋಗವಾಗಿ ಮಾಡಿದಪಂ , ಮಾಡಿದಪರ್, ನೋಡಿದಪರ್ ಮುಂತಾದ ಪದಗಳನ್ನು ಕೊಟ್ಟಿದ್ದಾನೆ. ಹೊಸಗನ್ನಡದಲ್ಲಿ 'ಮಾಡಿದಪಂ' ಪದದ ಅರ್ಥ (ಕ್ರಿಯಾಪದವಾಗಿ) ಮಾಡುವನು ಇಲ್ಲವೆ ಮಾಡುತ್ತಾನೆ. ಹಾಗಾಗಿ ವರ್ತಮಾನ ಮತ್ತು ಭವಿಷತ್ ಕಾಲಗಳಿಗೆ ಹೊಸಗನ್ನಡದಲ್ಲಿ ವ್ಯತ್ಯಾಸವಿಲ್ಲ. ಭವಿಷತ್ ಆಖ್ಯಾತ ಪ್ರತ್ಯಯವನ್ನು ಕಳೆದಂತೆಯೇ ವರ್ತಮಾನಕಾಲ ಆಖ್ಯಾತ ಪ್ರತ್ಯಯವನ್ನು ಕಳೆದು ಕೃಲ್ಲಿಂಗ ಮಾಡಬಹುದು.

ಉದಾಹರಣೆಗೆ: ಮಾಡಿದಪ + ಮ್ =ಮಾಡಿದಪಂ (ಮಾಡುವವನು)

ಮಾಡಿದಪ+ಅಮ್= ಮಾಡಿದಪನಂ (ಮಾಡುವವನನ್ನು)

ಮಾಡಿದಪ+ ಇಂ=ಮಾಡಿದಪನಿಂ (ಮಾಡುವವನಿಂದ)

ಮಾಡಿದಪ+ ಗೆ=ಮಾಡಿದಪಂಗೆ (ಮಾಡುವವನಿಗೆ) ಇತ್ಯಾದಿ.

ಕೇಶಿರಾಜ ಕೊಟ್ಟಿರುವ ಬಹುವಚನ ಪದಗಳನ್ನು ಹೀಗೆಯೇ ವಿವರಿಸಬಹುದು.

ನೋಡಿದಪರ್ (ಇದಕ್ಕೆ ಪ್ರಥಮಾವಿಭಕ್ತಿ ಪ್ರತ್ಯಯವನ್ನು ಸೇರಿಸಲಾಗುವುದಿಲ್ಲ.)

ನೋಡಿದಪರ್ + ಅಮ್ = ನೋಡಿದಪರಂ (ನೋಡುವವರನ್ನು)

ನೋಡಿದಪರ್ + ಇಂ = ನೋಡಿದಪರಿಂ (ನೋಡುವವರಿಂದ)

ನೋಡಿದಪರ್ + ಗೆ = ನೋಡಿದಪರ್ಗೆ (ನೋಡುವವರಿಗೆ)

ನೋಡಿದಪರ್ +ಅತ್ತಣಿಂ = ನೋಡಿದಪರತ್ತಣಿಂ (ನೋಡುವವರ ದೆಸೆಯಿಂದ) ಇತ್ಯಾದಿ.

ಇನ್ನು ಕೆಲವು ಬೇರೆ ಉದಾಹರಣೆಗಳಿಂದ ಸ್ಪಷ್ಟಪಡಿಸಬಹುದು.

ಬರೆದಪಂ – ಬರೆಯುವವನು

ಬರೆದಪನಂ – ಬರೆಯುವವನನ್ನು

ಬರೆದಪನಿಂ – ಬರೆಯುವವನಿಂದ

ಬರೆದಪಂಗೆ – ಬರೆಯುವವನಿಗೆ

ಬರೆದಪನತ್ತಣಿಂ – ಬರೆಯುವವನ ದೆಸೆಯಿಂದ

ಬರೆದಪನ – ಬರೆಯುವವನ

ಬರೆದಪನೊಳ್ – ಬರೆಯುವವನಲ್ಲಿ

ಈ ದೃಷ್ಟಿಯಿಂದ ಕನ್ನಡ ಕೈಪಿಡಿಯಲ್ಲಿ ಹೇಳಿರುವ “ದ್ರಾವಿಡ ಭಾಷೆಗಳಲ್ಲಿ ನ್ಯಾಯವಾಗಿ ಕ್ರಿಯಾ ಪದಗಳೇ ಇಲ್ಲ” ಎಂಬ ಮಾತು ಸಮಂಜಸವಾಗಿದೆ.

**9. ಲಿಂಗವಿವಕ್ಷೆ:** ಸೂತ್ರ 98ರಲ್ಲಿ ಕೇಶಿರಾಜ ಒಂಬತ್ತು ಲಿಂಗಗಳನ್ನು ಪ್ರಸ್ತಾಪಿಸಿ, ಅವುಗಳಿಗೆಲ್ಲ ಪ್ರಯೋಗಗಳನ್ನು ಕೊಟ್ಟಿದ್ದಾನೆ. ಅವುಗಳಲ್ಲಿ ಕಡೆಯ ಆರು ಲಿಂಗಗಳು ಅನಗತ್ಯವಾದವುಗಳೆಂಬುದು ಅಲ್ಲಿನ ಪ್ರಯೋಗಗಳಿಂದ ಮನವರಿಕೆಯಾಗುತ್ತದೆ. ಅವುಗಳಲ್ಲಿ ಪುನರುಕ್ತಿ ದೋಷವೂ ಇದೆ.

ಉದಾಹರಣೆಗೆ ಅವ್ಯಯ ಲಿಂಗ ಮತ್ತು ವಿಶೇಷ್ಯಾಧೀನ ಲಿಂಗಗಳು ಒಂದೇ ಆಗಿವೆ.

ಅವ್ಯಯ ಲಿಂಗ– ಭೋಂಕನೆ ಬಂದಂ, ಭೋಂಕನೆ ಬಂದಳ್, ಭೋಂಕನೆ ಬಂದುದು,

ವಿಶೇಷ್ಯಾಧೀನ ಲಿಂಗ– ನೇರಿದನಿವಂ, ನೇರಿದನಿವಳ್,ನೆರಿತಿದು,

ಹೀಗೆ ಈ ಆರು ಲಿಂಗಗಳು ಕನ್ನಡಕ್ಕೆ ಹೊಂದುವುದಿಲ್ಲವೆಂದು ಅರಿತು ಕೊನೆಯಲ್ಲಿ “ಇಂತು ಲಿಂಗತ್ರಯಂ ಕನ್ನಡದೊಳ್ ಪಿರಿದುಂ ಪ್ರಸಿದ್ಧಮಾಗಿರ್ಪುವು; ಮಿಕ್ಕ ಲಿಂಗಂಗಳೆಲ್ಲಂಕ್ವಚಿತ್ ಪ್ರಯೋಗಂಗಳ್” ಎಂದಿದ್ದಾನೆ.

ಈ ಲಿಂಗ ವಿವಕ್ಷೆ ಅನಾವಶ್ಯಕವೆನಿಸಿದರೂ ಇಲ್ಲಿ ಕೇಶಿರಾಜನ ಸಂಶೋಧನ ಪ್ರವೃತ್ತಿ,ಸೂಕ್ಷ್ಮಾವಲೋಕನ ಸಾಮರ್ಥ್ಯ, ಶಬ್ದ ಸಂಗ್ರಹ ಜಾಣ್ಮೆ ಇತ್ಯಾದಿಗಳನ್ನು ಗುರುತಿಸಬಹುದು.

ಸೂತ್ರ 102 ರಲ್ಲಿ ‘ಜನ’ ಎಂಬ ಶಬ್ದದ ಲಿಂಗವನ್ನು ತೀರ್ಮಾನಿಸುವುದು ಹೇಗೆ ಎಂಬುದನ್ನು ಸ್ಪಷ್ಟವಾಗಿ ಹೇಳಿದ್ದಾನೆ. ‘ಜನ’ ಎಂಬ ಶಬ್ದ ಸಹಜವಾಗಿ ನಪುಂಸಕ ಲಿಂಗವೆ. ಆದರೆ ದುಸ್, ಸತ್,ಸು ಎಂಬಿವುಗಳು ‘ಜನ’ ಶಬ್ದದ ಹಿಂದೆ ಇದ್ದರೆ ಆಗ ಅದು ಪುಲ್ಲಿಂಗವಾಗುತ್ತದೆ ಎಂದಿದ್ದಾನೆ. ಹಾಗಾದರೆ ‘ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ’ ಎಂಬ ಸರ್ವಜ್ಞನ ವಚನದಲ್ಲಿ ಬರುವ ‘ಸಜ್ಜನ’ ಎಂಬ ಶಬ್ದ ಪುರುಷರಿಗೆ ಮಾತ್ರ ಸೀಮಿತವೆ? ಸ್ತ್ರೀಯರಿಗೆ ಅನ್ವಯಿಸುವುದಿಲ್ಲವೆ? ಎಂಬುದಾಗಿ ವಿದ್ವಾಂಸರು ಸಂದೇಹ ವ್ಯಕ್ತಪಡಿಸಿದ್ದಾರೆ. (ದರ್ಪಣ ದೀಪಿಕೆ, ಪು.214)

**10. ವಿಭಕ್ತಿ:** ಸೂತ್ರ 142 ರಲ್ಲಿ ಪಂಚಮೀ ವಿಭಕ್ತಿಯನ್ನು ಕುರಿತು ಹೇಳಲಾಗಿದೆ. ಅಪಾದಾನದಲ್ಲಿ ಪಂಚಮೀ ವಿಭಕ್ತಿ ಪ್ರಯೋಗವಾಗುತ್ತದೆ. ಅಪಾದಾನವೆಂದರೆ ಒಂದು ಮತ್ತೊಂದರಿಂದ ಅಗಲುವುದು ಎಂದು ಅರ್ಥ. ಪಂಚಮೀ ವಿಭಕ್ತಿ ಭಯ, ಸ್ವೀಕಾರ, ಇಷ್ಟ, ಅನಿಷ್ಟ ಹೇತು, ಉದಯ, ಗೌರವ ಇವುಗಳಲ್ಲಿ ಬಳಕೆಯಾಗುತ್ತದೆ– ಇದು ಸೂತ್ರದ ತಾತ್ಪರ್ಯ. (ವೃತ್ತಿಯಲ್ಲಿ 'ಅಪಾದಾನಮೆಂದಾವುದಾನೊಂದಜೆಂತೊಲಗುವುದು' ಎಂದು ಸ್ಪಷ್ಟವಾಗಿ ಹೇಳಲಾಗಿದೆ.) ಶಬ್ದ ಕೋಶಗಳ ಅರ್ಥವೂ 'ಅತ್ತಣ' ಎಂಬುದಕ್ಕೆ ಆ ಕಡೆಯ,ಆ ಸ್ಥಳದ, ಅತ್ತ ಎಂದೇ ಇದೆ. ಒಟ್ಟಿನಲ್ಲಿ 'ಅತ್ತಣ' ಎಂಬುದು ದಿಗ್ವಾಚಿಯಾಗಿದೆ. ಪ್ರಯೋಗಗಳಲ್ಲಿ ಮರದತ್ತಣಿಂ ಪಣ್ಣುದಿರ್ದುದು , ಕೆಱೆಯತ್ತಣಿಂ ಬಂದಂ ಎಂಬುವು ಸರಿಯಾಗಿವೆ. (ಇಲ್ಲಿಯೂ ಮರದ ಕಡೆಯಿಂದ ಎಂಬುದಕ್ಕೂ ಕೆರೆಯ ಕಡೆಯಿಂದ ಎಂಬುದಕ್ಕೂ ಸೂಕ್ಷ್ಮ ವ್ಯತ್ಯಾಸವಿದೆ.) ಆದರೆ 'ಕೃಷ್ಣನತ್ತಣಿಂ ಪಿರಿಯ ಬಲಭದ್ರಂ'ಹಾಗೂ 'ಸದ್ವಂಶದತ್ತಣಿಂಪುಟ್ಟಿದಂ' ಎಂಬ ವಾಕ್ಯಗಳ ಅರ್ಥ ಬೇರೆಯೇ ಆಗುತ್ತದೆ.

ಅಲ್ಲದೆ ಪಂಚಮೀ ವಿಭಕ್ತಿ ಕನ್ನಡದಲ್ಲಿ ಸಹಜವಾಗಿ ಇಲ್ಲ, ಪಂಚಮಿ ಅರ್ಥದಲ್ಲಿ ತೃತೀಯವೇ ಬಳಕೆಯಾಗುತ್ತದೆ ಎಂಬುದನ್ನು ವಿದ್ವಾಂಸರು ಈಗಾಗಲೇ ನಿರೂಪಿಸಿದ್ದಾರೆ. ಕೇಶಿರಾಜನು ಕೃಷ್ಣನತ್ತಣಿಂ ಎಂಬುದರಲ್ಲಿನ 'ಅತ್ತಣಿಂ' ಎಂಬುದನ್ನು ಮರೆಮಾಡಿ 'ಕೃಷ್ಣನಿಂ' ಎಂದು ಹೇಳಬಹುದು ಎಂದಿದ್ದಾನೆ. ಇದರರ್ಥ ಪರೋಕ್ಷವಾಗಿ ಪಂಚಮೀ ವಿಭಕ್ತಿ ಇಲ್ಲವೆಂಬುದನ್ನು ಒಪ್ಪಿಕೊಂಡಿರುವಂತೆ ತೋರುತ್ತದೆ.

ಸಪ್ತಮೀ ವಿಭಕ್ತಿ ಪ್ರತ್ಯಯ 'ಒಳ್' ಎಂದೇ ಎಲ್ಲ ಪ್ರಯೋಗಗಳಲ್ಲಿ ಕೇಶಿರಾಜ ಹೇಳಿದ್ದಾನೆ. ಹಳಗನ್ನಡದಲ್ಲಿ ಬಹುಶಃ 'ಒಳ್'ಮಾತ್ರ ಸಪ್ತಮೀ ವಿಭಕ್ತಿ ಪ್ರತ್ಯಯವಾಗಿದ್ದಿರಬಹುದು. ಹೊಸಗನ್ನಡದಲ್ಲಿ 'ಅಲ್ಲಿ' ಎಂಬದು ಗ್ರಾಂಥಿಕ ಭಾಷೆಯಲ್ಲಿ ಸಪ್ತಮೀ ವಿಭಕ್ತಿ ಪ್ರತ್ಯಯವಾಗಿದೆ. ಉಳಿದಂತೆ ಆಡು ಭಾಷೆಯಲ್ಲಿ ಒಳಗೆ, ಆಗೆ, ಆಗ ಮತ್ತು ಏಲಿ ಗಳು ಬಳಕೆಯಲ್ಲಿವೆ.

ಉದಾಹರಣೆಗೆ ಮನೇ ಒಳಗ, ಮನೆಯೊಳಗೆ, ಮನೇಒಳಗೆ, ಮನ್ಯಾಗೆ, ಮನ್ಯಾಗ ಹೊಲ್ದಾಗ, ಪ್ಯಾಟ್ಯಾಗ, ನಮ್ಮೂರಾಗ, ನಮ್ಮೂರ್ನಾಗ, ಮನೇಲಿ, ಪ್ಯಾಟೇಲಿ ಇತ್ಯಾದಿ.

ಇಂತಹ ಇನ್ನು ಕೆಲವು ವಿಷಯಗಳನ್ನು ಪ್ರಸ್ತುತ ಕೃತಿಯಿಂದ ಹೆಕ್ಕಿ ತೆಗೆದು ಚರ್ಚಿಸಬಹುದಾಗಿದೆ. ಭಾಷೆಯು ವ್ಯಾಕರಣ ನಿಯಮಗಳನ್ನು ಮೀರಿ ಬೆಳೆಯುತ್ತದೆ ಎಂಬುದಕ್ಕೆ 'ಶಬ್ದಮಣಿ ದರ್ಪಣ'ದಲ್ಲಿಯೇ ನಿದರ್ಶನಗಳಿವೆ. ವೈಯ್ಯಾಕರಣಿ ತನ್ನ ಸಮಕಾಲೀನ ಅಥವಾ ಅದಕ್ಕೂ ಹಿಂದಿನ ಭಾಷೆಯನ್ನು ಅಧ್ಯಯನಕ್ಕೊಳಪಡಿಸಿ ಆ ಭಾಷೆಯ ವ್ಯಾಕರಣ ನಿಯಮಗಳನ್ನು ರೂಪಿಸುತ್ತಾನೆ. ಆ ನಿಯಮಗಳು ಭಾಷೆಗೆ ಒಂದು ಹಂತದವರೆಗೆ ಮಾತ್ರ ಅನ್ವಯಿಸುತ್ತವೆ. ಭಾಷೆಯು ಹರಿಯುವ ಹೊಳೆಯಂತೆ. ಆ ಹೊಳೆ ತನ್ನ ಮಾರ್ಗವನ್ನು ತಾನೆ ಕಂಡುಕೊಂಡು ಸಾಗುತ್ತದೆ. ಅದರಂತೆ ಕನ್ನಡವೂ ಕೇಶಿರಾಜನ ನಿಯಮಗಳನ್ನು ಮೀರಿ ಬೆಳೆದಿದೆ. 'ಶಬ್ದಮಣಿ ದರ್ಪಣ'ವು ಒಂದು ಘಟ್ಟದ ಕನ್ನಡ ಭಾಷೆಯ ಅಂಗಾಂಗಳನ್ನು ಕುರಿತು ಸಮಗ್ರವಾಗಿ ನಿರೂಪಿಸಿರುವ ಕೃತಿಯಾಗಿದೆ. ಇದರಲ್ಲಿ ಕೇಶಿರಾಜನ ಪಾಂಡಿತ್ಯ, ಪ್ರತಿಭೆ, ಸೂಕ್ಷ್ಮದೃಷ್ಟಿ, ಮತ್ತು ಕನ್ನಡ ಭಾಷೆಯ ಬಗೆಗಿನ ಕಾಳಜಿ ಇತ್ಯಾದಿಗಳನ್ನು ಅರಿಯಬಹುದಾಗಿದೆ. ವಿಚಾರವನ್ನು ಸ್ಪಷ್ಟಗೊಳಿಸಲು ಆತ ನೀಡುವ ಪ್ರಯೋಗಗಳು ಆತನ ಪಾಂಡಿತ್ಯವನ್ನು ತಿಳಿಸಿದರೆ, ಆತನ ಸ್ವಂತ ರಚನೆಗಳಿಂದ ಆತನ ಕವಿತ್ವ ಶಕ್ತಿಯನ್ನು ಅರಿಯಬಹುದಾಗಿದೆ. ಭಾಷಾ ಶುದ್ಧತೆಯ ಬಗೆಗೆ ಆತನಿಗಿರುವ ಕಾಳಜಿ ಎಲ್ಲ ಕಾಲಕ್ಕೂ ಪ್ರಸ್ತುತವಾಗುತ್ತದೆ. ಈ ವಿಚಾರದಲ್ಲಿ ಕೇಶಿರಾಜ ಸಂಪ್ರದಾಯಶೀಲನಾಗಿ ಕಂಡರೂ ಅನುಕರಣ ಯೋಗ್ಯನಾಗಿದ್ದಾನೆ.

-------------------ooooooo-------------------